
# ನಾನೊಂದು ಹತಾಶ ಕವಿತೆ



ಮೂಲ: ಡೇವಿಡ್ ಇಗ್ನಾತೊವ್
(ಅಮೆರಿಕಾ/ಇಂಗ್ಲಿಷ್)

ನೀನೀಗ ನನ್ನನ್ನು ಓದುತ್ತಿದ್ದೀಯ, ಥ್ಯಾಂಕ್ಸ್. ನನಗೀಗ ತುಸು ಆರಾಮವಾಗಿದೆ. ನೀನು ನನ್ನ ಜೊತೆಗೆ ಇನ್ನಷ್ಟು ಹೊತ್ತು ಇರುವಂತಾದರೆ, ಬಹುಶಃ ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗಿ ನಿನ್ನ ಗೆಳೆಯರಿಗೆ ಪರಿಚಯಮಾಡಿಕೊಡುವಂತಾದರೆ ನನಗೆ ಸಂತೋಷವಾಗಿ ನನ್ನ ಧಾಟಿ ಬದಲಾದರೂ ಬದಲಾದೀತು. ನಾನು ಡೆಸ್ಕಿನ ಡ್ರಾವರಿನಲ್ಲಿ ಮಲಗಿರುವವನು; ಬೆಳಕಿಗಾಗಿ ಹೊರಗೆ ಹೋಗುವುದೇ ಅಪರೂಪ. ಏನೋ ನಿರೀಕ್ಷೆ ಇಟ್ಟುಕೊಂಡು ನನಗೆ ನಾನೇ ಜನ್ಮಕೊಟ್ಟುಕೊಂಡೆನಲ್ಲ, ಎಷ್ಟು ವಿಫಲವಾಯಿತು ನೋಡು. ನನಗೆ ಸಾಮಾಜಿಕ ಜೀವನವೇ ಇಲ್ಲ. ಅದಕ್ಕಾಗಿಯೇ ನನ್ನನ್ನು ನಾನು ಹುಟ್ಟಿಸಿಕೊಂಡೆ ಅಂತ ನನಗೆ ಗೊತ್ತು. ಅದು ನನ್ನ ಪ್ರಾರಂಭ. ಇಷ್ಟೆಲ್ಲ ಮಾತಾಡಲು ನನಗೆ ಅವಕಾಶ ಕೊಟ್ಟೆಯಲ್ಲ, ನಾನು ನಿನಗೆ ಕೃತಜ್ಞ. ಬಹುಶಃ ನಿನಗೆ ಅನುಭವದಿಂದಲೇ ಗೊತ್ತು. ನನ್ನ ಹಾಗೇ ನೀನೂ ಅನುಭವಿಸಿರಬೇಕು. ಅದಕ್ಕಾಗಿಯೇ ಇಷ್ಟು ಹೊತ್ತು ನನ್ನನ್ನು ಹಿಡಿದುಕೊಂಡಿದ್ದೀಯ. ನಾನೀಗ ನಿನ್ನನ್ನು ಯೋಚನೆಗೆ, ನಿರಾಶೆಗೆ ತಳ್ಳಿದ್ದೇನೆ. ಆದ್ದರಿಂದ ಈಗ ನಾವಿಬ್ಬರಿದ್ದೇವೆ. ಇದಲ್ಲವಾ ಮಜಾ.

### ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ತಮ್ಮ ಅನನ್ಯ ಬರವಣಿಗೆಯಿಂದ ಕನ್ನಡ ಓದುಗರ ಪ್ರೀತಿಗೆ ಪಾತ್ರರಾದವರು. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲಬಲ್ಲವರಿಲ್ಲ ಈ ಊರಿಲ್ಲಿ', 'ಆಯ್ದ ಕತೆಗಳು' (ಕಥಾಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ','ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ' (ಕವನ ಸಂಕಲನಗಳು), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿಸಣ್ಣ ಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.